ಮಾಡಿಕೊಳ್ಳುವುದು ಅಸಾಧ್ಯವಾಗಿತ್ತು. ಆದುದರಿಂದ ಅನೇಕರು ಅವರ ದಿವ್ಯತೆಯ ವಿಷಯವಾಗಿ ಸಂಶಯಪಟ್ಟಿದ್ದಾರೆ. ಶ್ರೀರಾಮಕೃಷ್ಣರ ಜೀವನವನ್ನು ಹೋಲಿಸಿ ಕೆಲವರಂತೂ ಶ್ರೀಮಾತೆಗೆ ನೇರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ: ''ಅಮ್ಮಾ, ನಿಮಗೇಕೆ ರಾಧುವಿನ ಮೇಲೆ ಇಷ್ಟೊಂದು ಮೋಹ? ಅವಳಿಲ್ಲದೆ ನಿಮ್ಮಿಂದ ಏನೂ ನಡೆಯುತ್ತಿಲ್ಲ..'' ಇತ್ಯಾದಿ. ಶ್ರೀಮಾತೆಯವರು ಏನು ಉತ್ತರ ನೀಡುವರು? ಅಜ್ಞಾನಿಗಳನ್ನು ಅವರು ಹೇಗೆ ಸಮಾಧಾನ ಪಡಿಸುವರು? ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ , '**ಅವಜಾನಂತಿ ಮಾ ಮೂಢಾ ಮಾನುಷೀಂ ತನುಮಾಶ್ರಿತಂ। ಪರಂಭಾವಮಜಾನಂತೋ ಮಮ ಭೂತಮಹೇಶ್ವರಂ ॥**' (ಸರ್ವಭೂತಗಳಿಗೂ ಮಹೇಶ್ವರನಾದ ನನ್ನ ಪರಮ ಭಾವವನ್ನು ಅರಿಯದ ಮೂಢರು ಮನುಷ್ಯ ದೇಹವನ್ನು ಆಶ್ರಯಿಸುವ ನನ್ನನ್ನು ತಿರಸ್ಕರಿಸುತ್ತಾರೆ.) *(ಗೀತಾ, ೯.೧೧)* ಎಂದು ಹೇಳಿದಂತೆ ಶ್ರೀಮಾತೆಯೂ ಅಂದುಕೊಳ್ಳುತ್ತಾರೆ.

ತನಗೆ ಇಂತಹ ಪ್ರಾಮುಖ್ಯತೆ ಸಿಕ್ಕಿದ ರಾಧುವಂತೂ ತುಂಬಾ ವಿಚಿತ್ರ ಸ್ವಭಾವದವಳಾಗಿದ್ದಳು. ಅವಳಿಗೆ ಯಾವ ಅಹಂಕಾರವೂ ಇರಲಿಲ್ಲ. ಶ್ರೀಮಾತೆಯವರೇ ಅವಳ ಸರ್ವಸ್ವ. ಅವಳು ತನ್ನ ಹೆತ್ತತಾಯಿಯನ್ನೂ ದೂರವಿಟ್ಟಿದ್ದಳು. ವಿವಾಹವಾದ ನಂತರ ಪತಿಯ ಮನೆಯನ್ನು ಬಿಟ್ಟು ಶ್ರೀಮಾತೆಯ ಜೊತೆಯಲ್ಲೇ ಇದ್ದಳು. ಶ್ರೀಮಾತೆಯ ದಿವ್ಯತೆಯ ಬಗ್ಗೆ ಅವಳಿಗೇನೂ ಅರಿವಿರಲಿಲ್ಲ. ಅವರ ಬಳಿಗೆ ಬರುವ ಶಿಷ್ಯರು, ಆಧ್ಯಾತ್ಮಿಕ ಜೀವನ ಇದಾವುದನ್ನೂ ಅವಳು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಶ್ರೀಮಾತೆಯವರ ಸಹೋದರರಿಗೆ, ಅವರ ಪತ್ನಿಯರಿಗೆ, ಮಕ್ಕಳಿಗೆ ಶ್ರೀಮಾತೆಯವರ ಶಿಷ್ಯಂದಿರು ಕೊಡುವ ಧನದ ಮೇಲೆ ಆಕರ್ಷಣೆ ಇದ್ದರೆ, ರಾಧುವಿಗೆ ಅದರ ಮೇಲೆ ಗಮನವೇ ಇರಲಿಲ್ಲ. ಶ್ರೀಮಾತೆಯವರು ರಾಮೇಶ್ವರಕ್ಕೆ ತೀರ್ಥಯಾತ್ರೆಗೆ ಹೋದಾಗ ಅಲ್ಲಿಯ ರಾಜನು ನಾನಾ ರತ್ನಗಳಿಂದ ತುಂಬಿದ ತನ್ನ ಖಜಾನೆಯಿಂದ ಉಡುಗೊರೆಯಾಗಿ ಏನನ್ನಾದರೂ ಶ್ರೀಮಾತೆ ಸ್ವೀಕರಿಸಲು ಕೇಳಿಕೊಳ್ಳುವಂತೆ ದೇವಸ್ಥಾನದ ಪೂಜಾರಿಗಳಿಗೆ ಆದೇಶ ನೀಡಿದನು. ವೈರಾಗ್ಯದಿಂದ ತುಂಬಿದ ಶ್ರೀಮಾತೆ ತಾವು ಏನನ್ನೂ ಸ್ವೀಕರಿಸದೆ, ರಾಧುವಿಗೆ ಬೇಕಾದುದನ್ನು ತೆಗೆದುಕೊಳ್ಳಲು ಹೇಳಿದರೆ, ರಾಧು ಖಜಾನೆಯಿಂದ ಏನನ್ನೂ ತೆಗೆದುಕೊಳ್ಳದೆ ಹೊರಗಿನ ಅಂಗಡಿಯಿಂದ ಸ್ಲೇಟ್, ಕಡ್ಡಿಯನ್ನು ಖರೀದಿ ಮಾಡಿಸಿಕೊಂಡಳು. ಇಂತಹ ರಾಧು ಶ್ರೀಮಾತೆಗಂತೂ ನಾನಾ ರೀತಿಯ ತೊಂದರೆಗಳನ್ನು ಕೊಟ್ಟು ಗೋಳಾಡಿಸಿದ್ದಳು. ಇದುವೇ ಪ್ರಪಂಚದ ಮಾನವರಿಗೆ ಅವಳು ನೀಡಿದ ಕೊಡುಗೆ. ಇದರಿಂದ ಸಂಸಾರದಲ್ಲಿ ಬಳಲಿ, ಮಾತೆಯವರ ಬಳಿ ಬಂದ ಜನರನ್ನು ಶ್ರೀಮಾತೆಯವರು ಸಮಾಧಾನಪಡಿಸಿ, ಮುಕ್ತಿಯ ಪಥದಲ್ಲಿ ಮುನ್ನಡೆಸಿದರು. ಹೀಗೆ ಯೋಗಮಾಯೆಯೊಂದಿಗೆ ಶ್ರೀಮಾತೆಯವರು ಶ್ರೀರಾಮಕೃಷ್ಣರ ಅವತಾರದ ಉದ್ದೇಶವನ್ನು ಈಡೇರಿಸಿದರು.

ಶ್ರೀಮಾತೆಯವರು ತಮ್ಮ ಲೀಲೆಯನ್ನು ಮುಗಿಸಿ ಸ್ವಧಾಮಕ್ಕೆ ತೆರಳುವ ಸಮಯ ಬಂದಾಗ, ರಾಧುವಿನೊಂದಿಗಿದ್ದ ಬಂಧನವನ್ನು ಬಿಡಿಸಿಕೊಂಡ ಘಟನೆ ಇನ್ನೂ ಆಶ್ಚರ್ಯಕರವಾಗಿತ್ತು. ಲೀಲೆಯ ಅಂತ್ಯಭಾಗದಲ್ಲಿ ಶ್ರೀಮಾತೆ ರೋಗದಿಂದ ಮಲಗಿದರು. ಸ್ವಾಮಿ ಶಾರದಾನಂದ ಮಹಾರಾಜರು ಅವರ ಶುಶ್ರೂಷೆ ಮಾಡುವ ಸಲುವಾಗಿ ಶ್ರೀಮಾತೆಯವರನ್ನು 'ಉದ್ಬೋಧನ'ಕ್ಕೆ ಕರೆಸಿಕೊಂಡರು. ಜೊತೆಯಲ್ಲಿ ರಾಧು, ಸುರಬಾಲಾ ಮತ್ತು ಉಳಿದವರೆಲ್ಲರೂ ಇದ್ದರು. ಒಂದು ದಿನ ಶ್ರೀಮಾತೆ ತಮ್ಮ ಸೇವಕಿಯನ್ನು ಕರೆದು, ರಾಧು ಮತ್ತು ಜೊತೆಯಲ್ಲಿರುವವರನ್ನೆಲ್ಲಾ ಜಯರಾಂಬಾಟಿಗೆ ಕಳುಹಿಸಲು ಶಾರದಾನಂದರಿಗೆ ಹೇಳುವಂತೆ ಆದೇಶವನ್ನು ನೀಡಿದರು. ''ರಾಧು ಇಲ್ಲದೆ ಇರಲು ನಿಮ್ಮಿಂದ ಸಾಧ್ಯವೆ ?'' ಎಂದು ಸೇವಕಿ ಕೇಳಿದಾಗ ಶ್ರೀಮಾತೆ, ''ಖಂಡಿತ ಸಾಧ್ಯ''ವೆಂದು ಗಂಭೀರವಾಗಿ ಉತ್ತರವನ್ನು ನೀಡಿದರು. ಶ್ರೀಮಾತೆಯವರು ಇನ್ನು ಈ ಜಗತ್ತಿನಲ್ಲಿರಲು ಇಚ್ಛಿಸುತ್ತಿಲ್ಲವೆಂದು ಅರಿತುಕೊಂಡ ಗೋಲಾಪ್ ಮಾ, ಯೋಗಿನ್ ಮಾ ಮೊದಲಾದವರು, ಮಾತೆಯ ಮನಸ್ಸನ್ನು ರಾಧುವಿನಲ್ಲಿರಿಸಲು ಪ್ರಯತ್ನಿಸಿದರು. ಆದರೆ ಅದು ನಿಷ್ಫಲವಾಗಿ, ರಾಧು ತನ್ನ ಬಳಿ ಬರಬಾರದೆಂದು ಶ್ರೀಮಾತೆಯವರು ಆಜ್ಞೆ ನೀಡಿದರು. ''ನಾನು ಒಮ್ಮೆ ಬಿಟ್ಟಿರುವುದನ್ನು ಮತ್ತೆ ಸ್ವೀಕರಿಸುವುದಿಲ್ಲ'' ಎಂದು ಖಚಿತವಾಗಿ ನುಡಿದರು. ಕೊನೆಗೆ ಒಂದು ದಿನ ರಾಧು ಶ್ರೀಮಾತೆಯ ಬಳಿ ಬಂದಾಗ, ಶ್ರೀಮಾತೆ ಅವಳಿಗೆ, ''ಕಂಬಕ್ಕೆ ಕಟ್ಟಿಕೊಂಡಿದ್ದ ನನ್ನನ್ನು ನಾನು ಈಗ ಬಿಡಿಸಿಕೊಂಡಿದ್ದೇನೆ...ನೀನು ಇನ್ನೇನು ಮಾಡಬಲ್ಲೆ ನನಗೆ? ...ನಾನೇನು ಕೇವಲ ಮನುಷ್ಯಳೆಂದುಕೊಂಡಿದ್ದೀಯಾ? ನೀನು ಇಲ್ಲಿಂದ ಹೊರಟುಹೋಗು'' ಎಂದರು. ಅವರ ಮಾತು ರಾಧುವಿಗೆ ಎಷ್ಟು ಅರ್ಥವಾಯಿತೋ! ಅಂತೂ ಅಷ್ಟು ದಿನ ಶ್ರೀಮಾತೆಯವರಿಗೆ ಸದಾ ಕಿರುಕುಳವನ್ನು ಕೊಟ್ಟು ಅವರ ಲೀಲೆಗೆ ಸಹಕರಿಸಿದ ರಾಧು ತಣ್ಣಗಾದಳು; ತನ್ನ ಕರ್ತವ್ಯ ಮುಗಿಯಿತೋ ಎಂಬಂತೆ. ಆಕೆ ದೂರದಿಂದಲೇ ಅವರನ್ನು ನೋಡತೊಡಗಿದಳು.

ಶ್ರೀಮಾತೆಯವರ ಲೀಲಾವಸಾನವಾಯಿತು. ರಾಧುವಿನ ಮುಂದಿನ ಜೀವನ ಸಾಧಾರಣವಾಗಿ ನಡೆಯಿತು. ಆದರೆ ಅವಳ ವಾರ್ಧಕ್ಯದಲ್ಲಿ ರಾಮಕೃಷ್ಣ ಸಂಘದ ಹಿರಿಯ ಸಂನ್ಯಾಸಿಗಳು ಅವಳನ್ನು ಕಾಶಿಗೆ ಕಳುಹಿಸುವ ಏರ್ಪಾಡು ಮಾಡಿದಾಗ ಅವಳು , ''ಕಾಶಿಯಲ್ಲಿ ಮರಣ ಹೊಂದಿದರೆ ನಿರ್ವಾಣ ಪ್ರಾಪ್ತಿಯಾಗುವುದು. ನನಗೇಕೆ ನಿರ್ವಾಣ? ನನ್ನ ಸ್ಥಾನ ಶ್ರೀಮಾತೆಯಲ್ಲಿ.. ನಾನು ಜಯರಾಂಬಾಟಿಗೆ ಹೋಗುತ್ತೇನೆ'' ಎಂದು ಹೇಳಿ ಜಯರಾಂಬಾಟಿಗೆ ಹೊರಟು ಹೋದಳು. ಅಂದರೆ, ಮಾನವ ಶರೀರವನ್ನು ತ್ಯಜಿಸಿ, ದೈವೀಸ್ವರೂಪದಲ್ಲಿಯೂ ತನ್ನ ಲೀಲೆಯನ್ನು ಮುಂದುವರಿಸಿದ ಶ್ರೀಮಾತೆಯಲ್ಲಿ ಅವರ ಯೋಗಮಾಯೆ ಕೂಡ ಒಂದಾಗಿರುವಳು ಎಂದೇ ನಾವು ಅರಿತುಕೊಳ್ಳಬೇಕಾಗುವುದು.

# ಒರಟ ಸಂನ್ಯಾಸಿ ಹಾಗೂ ಶ್ರೀಮಾತೆ

ಮೂಲ : **ಸ್ವಾಮಿ ಶಾಂತಾನಂದ ಪುರಿ**

ಅನುವಾದ: **ಕೆ.ಆರ್. ಮೋಹನ್**

*(ಸ್ವಾಮಿ ಶಾಂತಾನಂದಪುರಿ (೧೯೨೮–೨೦೧೪)ಯವರು 'fragrant flowers' ಎಂಬ ತಮ್ಮ ಕೃತಿಯಲ್ಲಿ ದಾಖಲಿಸಿದ ಅನುಭವದ ಭಾವಾನುವಾದವಿದು. ಅವರು ಶ್ರೀರಾಮಕೃಷ್ಣರ ಮಾನಸಪುತ್ರ ಸ್ವಾಮಿ ಬ್ರಹ್ಮಾನಂದರ ಶಿಷ್ಯರಾದ ಸ್ವಾಮಿ ಪುರುಷೋತ್ತಮಾನಂದ ಪುರಿಯವರಿಂದ ಮಂತ್ರದೀಕ್ಷೆ ಪಡೆದರು. ಭಾರತ ಸರಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದು, ನಿವೃತ್ತಿ ನಂತರ ೧೯೯೨ ರಲ್ಲಿ ಸಂನ್ಯಾಸ ಪಡೆದರು. ತಮ್ಮ ಗುರುಗಳ ಆದೇಶದ ಮೇಲೆ ೭ ವರ್ಷ ಪರಿವ್ರಾಜಕರಾಗಿ ಭಾರತದಾದ್ಯಂತ ಸಂಚಾರ ಮಾಡಿದರು. ಆ ಸಂದರ್ಭದಲ್ಲಿ ಅವರು ಜಯರಾಂಬಾಟಿಗೆ ಭೇಟಿಕೊಟ್ಟಿದ್ದರು. ಈ ಲೇಖನದ ಅನುವಾದಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.)*



**ಜು**ಲೈ ೧೯೯೨ರಲ್ಲಿ ನನಗೆ ಬೇಲೂರು ಮಠದಿಂದ ಕಾಮಾರಪುಕುರ ಹಾಗೂ ಜಯರಾಂಬಾಟಿಯ ಆಶ್ರಮಗಳಿಗೆ ಹೋಗಲು ಪರಿಚಯ ಪತ್ರ ದೊರಕಿತ್ತು. ಠಾಕೂರರ ಮೇಲೆ ನನಗಿದ್ದ ಭಕ್ತಿ, ಶ್ರದ್ಧೆ ಹಾಗೂ ವಿಶ್ವಾಸ ಶ್ರೀಮಾತೆಯವರ ತನಕ ವಿಸ್ತಾರವಾಗಿರಲಿಲ್ಲ. ನಾನು ಶ್ರೀಮಾತೆಯವರ ಬಗ್ಗೆ ಬರೆದಿದ್ದ ಎಲ್ಲಾ ಕೃತಿಗಳನ್ನು ಓದಿಕೊಂಡಿದ್ದೆ. ಠಾಕೂರರು, ಸ್ವಾಮೀಜಿ ಮತ್ತು ಇತರ ನೇರ ಶಿಷ್ಯರಿಗೆ ಶ್ರೀಮಾತೆಯವರ ಬಗ್ಗೆ ಇರುವ ಪೂಜ್ಯಭಾವನೆ ಕೂಡ ನನಗೆ ತಿಳಿದಿತ್ತು. ವಾಸ್ತವಕ್ಕಿಂತ ಜಾಸ್ತಿಯಾಗಿ ಮಹಾಪುರುಷರ ಧರ್ಮಪತ್ನಿಗಳ ಬಗ್ಗೆ ಗುಣಗಾನ ಮತ್ತು ಉತ್ಪ್ರೇಕ್ಷೆ ಮಾಡುತ್ತಾರೆ ಎಂದು ನನ್ನ ಭಾವನೆ. ಹಾಗಾಗಿ ನನಗೆ ಜಯರಾಂಬಾಟಿಗೆ ಹೋಗಲು ಅಂತಹ ಉತ್ಸಾಹವಿರಲಿಲ್ಲ.

ಕಾಮರಾಪುಕುರ ಆಶ್ರಮದಲ್ಲಿ ನನ್ನ ವಾಸ್ತವ್ಯದ ಮೂರನೇ ದಿನ ಠಾಕೂರರ ವಿಗ್ರಹದ ಮುಂದೆ ಕುಳಿತು ಧ್ಯಾನ ಮಾಡುತ್ತಿದ್ದೆ. ಆ ದಿನ ಅವರನ್ನು ಕಾವಿ ಬಟ್ಟೆಯಿಂದ ಅಲಂಕರಿಸಿದ್ದರು. ಧ್ಯಾನದ ಮಧ್ಯೆ ಒಮ್ಮೆ ಕಣ್ಣು ತೆರೆದಾಗ, ಠಾಕೂರರು ಇದ್ದ ಜಾಗದಲ್ಲಿ ಶ್ರೀಮಾತೆಯವರು ತಲೆಯ ಮೇಲೆ ಸೆರಗನ್ನು ಹಾಕಿಕೊಂಡಿದ್ದರು. ನೀಳವಾದ ಕೇಶರಾಶಿಯನ್ನು ಭುಜದ ಮೇಲೆ ಇಳಿಬಿಟ್ಟಿದ್ದರು. ಕೆಲವು ನಿಮಿಷ ನಾನು ತದೇಕಚಿತ್ತದಿಂದ ಅವರನ್ನು ನೋಡುತ್ತಿದ್ದೆ. ಯಾವ ಬದಲಾವಣೆಯೂ ಕಾಣಿಸಲಿಲ್ಲ. ನಿಜವಾಗಿಯೂ ನಾನು ಎಚ್ಚರದಲ್ಲಿದ್ದೆನೆಂದು ಖಾತ್ರಿ ಮಾಡಲು ನನ್ನ ಮೈಯನ್ನು ಚಿವುಟಿಕೊಂಡೆ. ಅನಂತರ ನಾನು ಧ್ಯಾನಕ್ಕೆ ಹೋದೆ. ಕುತೂಹಲದಿಂದ ಆಗಾಗ ಕಣ್ಣು ತೆರೆದು ನೋಡುತ್ತಿದ್ದೆ. ಆಗಲೂ ಕೂಡ ಠಾಕೂರರ ಸ್ಥಾನದಲ್ಲಿ ಶ್ರೀಮಾತೆಯವರು ಕಾಣಿಸುತ್ತಿದ್ದರು. ಕೊನೆಗೆ ನಾನು ಧ್ಯಾನದಿಂದ ಎದ್ದಾಗ, ಕಾವಿ ಧರಿಸಿದ ಠಾಕೂರರು ಕಾಣಿಸಿದರು. ಈ ವಿಚಿತ್ರ ದರ್ಶನದ ಹಿಂದೆ ಇರುವ ಮಹತ್ವ ತಿಳಿಯದೆ, ನನಗೆ ಗೊಂದಲವಾಯಿತು. ಬಹುಶಃ ಶ್ರೀಮಾತೆ ತಮಗಿಂತ ಬೇರೆಯಲ್ಲ, ಮತ್ತು ತಮ್ಮಿಬ್ಬರಲ್ಲಿ ಭೇದವಿಲ್ಲ ಎಂದು ಠಾಕೂರರು ನನಗೆ ಮನವರಿಕೆ ಮಾಡಿಕೊಟ್ಟಿರಬೇಕು. ಮರುದಿನ ಜಯರಾಂಬಾಟಿಗೆ ಹೋಗಲು ತಯಾರಾದೆ.

ಜಯರಾಂಬಾಟಿ ಆಶ್ರಮದಲ್ಲಿ ನನಗೆ ಒಳ್ಳೆಯ ಕೋಣೆ ಕೊಟ್ಟರು. ನಾನಿದ್ದಾಗ ಯಾವ ಅಭ್ಯಾಗತರೂ ಬರಲಿಲ್ಲ. ಹಾಗಾಗಿ ಯಾರಿಗೂ ಹೆಚ್ಚು ಕೆಲಸವಿರಲಿಲ್ಲ. ವಾಸ್ತವ್ಯದ ಕೊನೆಯ ದಿನ, ನಾನು 'ಮಾತೃ ಮಂದಿರ'ದಲ್ಲಿ ಶ್ರೀಮಾತೆಯವರ ಎದುರು ಕುಳಿತು ಆಶ್ರಮದ ಸಂನ್ಯಾಸಿಗಳ ಜತೆ ಧ್ಯಾನಮಾಡುತ್ತಿದ್ದೆ. ಆಗ ಬೆಳಿಗ್ಗೆ ೫.೩೦ ಘಂಟೆಯಾಗಿತ್ತು. ಇದ್ದಕ್ಕಿದ್ದ ಹಾಗೆ ನಾನು ಶ್ರೀಮಾತೆಯವರಿಗೆ, ''ಅಮ್ಮ, ನೀವು ನಿಜವಾಗಿಯೂ ಶಕ್ತಿಶಾಲಿ ಜಗನ್ಮಾತೆಯಾಗಿದ್ದರೆ ನನಗೆ ಮನವರಿಕೆ ಮಾಡಿ ತೋರಿಸಿ. ನಾನು ದುರಹಂಕಾರಿ ಅಲ್ಲ, ಆದರೆ ಅಜ್ಞಾನಿ ಎಂದು ನಿಮಗೆ ಗೊತ್ತು. ದಯಮಾಡಿ ನಿಮ್ಮ ಮಹತ್ವದ ಬಗ್ಗೆ ನಂಬಿಕೆ ಬರುವ ಹಾಗೆ ಕೃಪೆ ಮಾಡಿ. ಈವತ್ತು ಯಾರಾದರೂ ನನಗೆ ಪ್ರಣಾಮಿ (ಸಂನ್ಯಾಸಿಗಳಿಗೆ ಮಾಡುವ ದಾನ) ಕೊಟ್ಟರೆ ಅದು ಕೇವಲ ೧ ಅಥವಾ ೨ ರೂಪಾಯಿ ಆದರೂ ಪರವಾಗಿಲ್ಲ. ಅದನ್ನು ರುಜುವಾತಾಗಿ ಭಾವಿಸುತ್ತೇನೆ'' ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿದೆ.

ಮಂದಿರದಿಂದ ಹೊರಬರುವಾಗ, ಮೆಟ್ಟಲಿನ ಹತ್ತಿರ ಒಬ್ಬ ಬ್ರಹ್ಮಚಾರಿ ನನ್ನ ಹತ್ತಿರ ಬಂದು, ''ಸ್ವಾಮೀಜಿ, ನನ್ನ ವೃದ್ಧ ತಾಯಿಯನ್ನು ಯಾತ್ರಾರ್ಥಿಯಾಗಿ ಕರೆದುಕೊಂಡು ಬಂದಿದ್ದೇನೆ. ನಿನ್ನೆ ನೀವು ಜಪ ಮಾಡುವುದನ್ನು ಅವರು ನೋಡಿದ್ದಾರೆ. ನಿಮಗೆ ನಮಸ್ಕಾರ ಮಾಡಬೇಕೆಂದು ಇಷ್ಟಪಟ್ಟಿದ್ದಾರೆ. ನೀವು ದಯಮಾಡಿ ಕೆಲವು ನಿಮಿಷ ಇಲ್ಲೇ ಇದ್ದರೆ ನಮ್ಮ ತಾಯಿಯನ್ನು ಕೋಣೆಯಿಂದ ಕರೆತರುತ್ತೇನೆ'' ಎಂದು ಹೇಳಿದ. ''ನಾನು ಹೊಸದಾಗಿ ಸಂನ್ಯಾಸ ಸ್ವೀಕಾರ ಮಾಡಿದ್ದೇನೆ. ನನಗಿಂತ ಹಿರಿಯಸಂನ್ಯಾಸಿಗಳು ಆಶ್ರಮದಲ್ಲಿ ಇದ್ದಾರೆ. ಅವರ